ಬೀಡಿಕಟ್ಟು ತಗೆದುಕೊಳ್ಳಲು ಶೆಟ್ಟರ ಅಂಗಡಿಗೆ ಹೋದಾಗ, 'ಮೇಷ್ಟ್ರೆ, ಇವತ್ತೇನು ಇಷ್ಟು ಬೇಗ ಶಾಲೆ ಬಿಟ್ಟರಿ' ಎಂದು ಶೆಟ್ಟರು ಮಾಸ್ತರರನ್ನ ಕೇಳಿದಾಗಲೇ ನಮ್ಮ ಗುಟ್ಟು ಹೊರಬಿದ್ದದ್ದು.

ಗಡಿಯಾರವನ್ನು ಸಾಮಾನ್ಯವಾಗಿ ಮನೆಯ ಬಾಗಿಲ ಚೌಕಟ್ಟಿನ ಮೇಲೆ, ಇಲ್ಲವೇ ಗೋಡೆಯಲ್ಲಿ ತುಸು ಎತ್ತರದಲ್ಲಿ ತೂಗು ಹಾಕುವುದು ಕ್ರಮ. ಎಲ್ಲರಿಗೂ ಸುಲಭಕ್ಕೆ ಕಾಣಲಿ ಎನ್ನುವುದು ಒಂದು ಉದ್ದೇಶವಾದರೆ, ಕಾಲಕ್ಕೆ ತಲೆ ತಗ್ಗಿಸಿಯೇ ಬಾಳಬೇಕು ಎನ್ನುವ ಸೂಚ್ಯಾರ್ಥ ಇರಬಹುದೇನೊ. ನಮ್ಮ ಮನೆಯಲ್ಲಿದ್ದ ದೊಡ್ಡ ಪೆಂಡುಲಂ ಗಡಿಯಾರಕ್ಕೆ ಹೊಟ್ಟೆಗೆ ಹಾಕುವವರು ಮೇಲಕ್ಕೇ ಹತ್ತಬೇಕಾಗಿತ್ತು. ಗಡಿಯಾರಕ್ಕೆ ಕೀ ಕೊಡುವುದು, ನಂತರದಲ್ಲಿ ಅದನ್ನು ಸಮವಾಗಿ ಗೋಡೆಗಾನಿಸಿ ನಿಲ್ಲಿಸುವುದು ಒಂದು ಕುಶಲ ಕಲೆ. ನಮ್ಮ ಮನೆಯಲ್ಲಿ ಕುಶಲಕರ್ಮಿಯಾದ ನನ್ನ ಅಪ್ಪಯ್ಯನೇ ಈ ಕೆಲಸ ಮಾಡುವುದಿತ್ತು. ಪ್ರತಿ ಶನಿವಾರ ರಾತ್ರಿ ಏಳುಗಂಟೆಗೆ ಈ ಕಾರ್ಯ. ಹಾಗಾಗಿ ಅಪ್ಪ ಎಲ್ಲೇ ಹೋದರೂ, ಕೀ ಕೊಡಬೇಕಾದ ಹೊತ್ತಿಗೆ ಮನೆಯಲ್ಲಿ ಹಾಜರಿರುತ್ತಿದ್ದ. ಮೇಜನ್ನು ಇರಿಸಿ, ಅದರ ಮೇಲೆ ಚಿಕ್ಕ ಮರದ ಸ್ಟೂಲ್ ಇಟ್ಟು ಅದರ ಮೇಲೆ ಅಪ್ಪ ಹತ್ತುತ್ತಿದ್ದ. ನಾನು, ಅಕ್ಕ ಸ್ಟೂಲಿನ ಒಂದೊಂದು ಬದಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿರಬೇಕಿತ್ತು–ಅಲುಗದಂತೆ. ತುಸು ಅಲುಗಿದರೂ ಬೈಗುಳ. ನಮಗೂ ಒಂದು ರೀತಿ ಹೆದರಿಕೆ, ಅಪ್ಪ ನಮ್ಮ ಮೇಲೆ ಬಿದ್ದರೆ ಅಂತ. ಹಿಂದಿನಿಂದ ಅಮ್ಮ ಬೇರೆ ಪದೇ ಪದೇ ಎಚ್ಚರಿಕೆ ಕೊಡುತ್ತ ನಮ್ಮನ್ನ ಇರಿಟೇಟ್ ಮಾಡುತ್ತಿದ್ದಳು.

ನಮ್ಮ ಮನೆಯ ಗಡಿಯಾರಕ್ಕೆ ಇನ್ನೊಂದು ರೋಗ ಇತ್ತು. ಕೀ ಕೊಡುವ ದಿನ– ಶನಿವಾರ–ಬೆಳಗಿನ ನಂತರ ಅದರ ನಡಿಗೆ ತುಸು ನಿಧಾನವಾಗಿ ಬಿಡುತ್ತಿತ್ತು. ಹಾಗಾಗಿ ಕೀ ಕೊಟ್ಟ ಬಳಿಕ ದೊಡ್ಡಪ್ಪನ ಬಳಿ ಹೋಗಿ ಅವರ ಬಕ್ಕಣಕ್ಕೆ ಹಾಕಿಕೊಳ್ಳುವ ಹೊಸ ಚೈನ್ ವಾಚಿನಲ್ಲಿನ ಟೈಂ ಕೇಳಿಕೊಂಡು ಬಂದು ಮನೆ ಗಡಿಯಾರದ ಮುಳ್ಳನ್ನು ಅಡ್ಜಸ್ಟ್ ಮಾಡಬೇಕಿತ್ತು. ನಮ್ಮನೆ ಗಡಿಯಾರಕ್ಕೆ ಏನಾಗಿದೆ ರೋಗ, ನಿಧಾನ ನಡೆಯುತ್ತೆ ಎಂದು ಅಮ್ಮ ಅಪ್ಪನನ್ನ ಕೇಳಿದರೆ, 'ಮನುಷ್ಯರೇ ವಯಸ್ಸಾದಂತೆ ಕೋಲೂರಿಕೊಂಡು ನಿಧಾನ ನಡೆಯುತ್ತಾರೆ, ಗಡಿಯಾರಕ್ಕೆ ವಯಸ್ಸಾಗದೆ? ಬರೋಬ್ಬರಿ ಹತ್ತು ವರ್ಷವಾಯಿತು ತಂದು' ಅನ್ನುತ್ತಿದ್ದರು. ಅಲ್ಲಿಯೇ ಗಡಿಯಾರಕ್ಕೂ ಮನುಷ್ಯರ ಜೀವಕ್ಕೂ ಮೊದಲ ಹೋಲಿಕೆ ನಾನು ಕೇಳಿದ್ದು. ನಮಗೆಲ್ಲ ಈ ಗಡಿಯಾರದ ಟಿಕ್ ಟಿಕ್ ದನಿ ನಿದ್ದೆ ಮಾಡಿಸುವ ಜೋಗುಳವಾದರೆ, ನಮ್ಮ ಸೋದರಮಾವನಿಗೆ ಅದು ಕಿರಿಕಿರಿ. ಆತ ನಮ್ಮ ಮನೆಗೆ ಬಂದಾಗಲೆಲ್ಲ ಪೆಂಡುಲಂ ನಿಲ್ಲಿಸಿ ಮಲಗಿಬಿಡುತ್ತಿದ್ದ. ನಿಂತ ಗಡಿಯಾರ ನೋಡಿ ಮರುದಿವಸ ಅಪ್ಪ ಬಲು ಬೇಸರ ಮಾಡಿಕೊಳ್ಳುತ್ತಿದ್ದರು. ಆದರದನ್ನ ಅವನೆದುರು ಹೇಳುವಂತಿಲ್ಲ, ಎಷ್ಟೆಂದರೂ ನೆಂಟ!

ಅಂತೂ ಈ ಪೆಂಡುಲಂ ಗಡಿಯಾರ ನಮ್ಮಿಂದ ದೂರವಾಯಿತು. ನನ್ನ ಅಪ್ಪ ಮತ್ತು ಅವನ ಅಣ್ಣಂದಿರಲ್ಲಿ ಹಿಸ್ಸೆಯಾದಾಗ, ಗಡಿಯಾರ ನನ್ನ ಒಬ್ಬ ದೊಡ್ಡಪ್ಪನ ಪಾಲಿಗೆ ಹೋಯಿತು. ಆ ಲೋಲಕದ ಗಡಿಯಾರವನ್ನು ಕಳೆದುಕೊಂಡು ಒಂದಿಷ್ಟು ಕಾಲ ಇಡೀ ಮನೆಯ ಗೋಡೆಯೇ ಬಿಕೋ ಎನಿಸುತ್ತಿತ್ತು. ಮತ್ತೊಂದು ಗಡಿಯಾರ ಕೊಂಡುಕೊಳ್ಳುವ ಸುದ್ದಿ ಬಂದಾಗ, ಆಗ ಆರೋ ಏಳನೆಯದ್ದೋ ತರಗತಿಯಲ್ಲಿದ್ದ ನನ್ನ ಅಕ್ಕ, 'ತನಗೆ ಬೆಳಗ್ಗೆ ಎಷ್ಟು ಹೊತ್ತಿಗೆ ಬೇಕೋ ಅಷ್ಟು ಹೊತ್ತಿಗೆ ಎದ್ದು ಓದಿಕೋಬೇಕಾಗುತ್ತೆ, ಹಾಗಾಗಿ ಅಲಾರಾಂ ಪೀಸ್ ತರುವ' ಅಂತ ಅಪ್ಪನನ್ನು ಒಪ್ಪಿಸಿದಳು. ಆ ಕಾಲಕ್ಕೇನೆ ಗಂಟೆಯಾಗುತ್ತಲೇ ಕೋಗಿಲೆಯಂತೆ ಉಲಿಯುವ, ಕೋಳಿಯಂತೆ ಕೂಗುವ ಪೆಂಡುಲಂ ಗೋಡೆಗಡಿಯಾರಗಳು ಬಂದಿದ್ದವು. ಅಮ್ಮ ಅದ್ಯಾರದೋ ಮನೆಯಲ್ಲಿ ಅಂಥ ಗಡಿಯಾರ ನೋಡಿದ್ದು, ಅದನ್ನೇ ತರುವ ಅಂತ ಹಟ ಮಾಡಿದ್ದಳು. ಕಡೆಗೆ ಅಕ್ಕನ ಮಾತೇ ನಡೆಯಿತು. ನಾವು ಹೇಳಿದ ಸಮಯಕ್ಕೆ ಟ್ರಿಣ್ ಎಂದು ಹೊಡೆದುಕೊಳ್ಳುವ ಅಲಾರಾಂ ಗಡಿಯಾರವು ನಮಗೆ ಆಗೊಂದು ವಿಸ್ಮಯವೇ. ಮತ್ತೆ ನಾವು ಕೂಡ ಅದಕ್ಕೆ ಕೀಲಿ ಕೊಡಬಹುದಿತ್ತು ಎನ್ನುವ ಸಂತೋಷ ನಮಗೆ. ಓದುವುದಕ್ಕೆ ಬೇಗನೆ ಏಳಲೆಂದು ಅಲಾರಾಂ ಇಟ್ಟುಕೊಳ್ಳುವ ಅಕ್ಕ, ಅದು ಕೂಗುತ್ತಲೆ ಟಪ್ ಎಂದು ಅದರ ತಲೆಯ ಮೇಲೆ ಜಪ್ಪಿ ಸುಮ್ಮನಾಗಿಸುತ್ತಿದ್ದಳು ಅನ್ನುವುದು ಬೇರೆಯದೇ ಕಥೆ.

ಗಡಿಯಾರದಲ್ಲಿ ಒಂದೊಂದು ಕ್ಷಣವೂ